# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **171** |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ |
| ಉತ್ತರಿಸುವ ದಿನಾಂಕ | 14/02/2024 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಶ್ರೀಮತಿ ದ್ವಾರಕ ಬಾಯಿ ವೇದಾಂತರವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಬ್ಯಾಲಾಳು, ಚೋಳನಾಯಕನ ಹಳ್ಳಿ, ಪೆದ್ದನ ಪಾಳ್ಯ ದೊಡ್ಡಮಾರನಹಳ್ಳಿ ಮತ್ತು ಕಾಡುಮಾರನಹಳ್ಳಿಯ 1198.34 ಎಕರೆ ಜಾಗವನ್ನು 11/13ನೇ ಏಪ್ರಿಲ್ 1939ರಂದು ಶ್ರೀ ರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥ ಸ್ವಾಮಿ ದೇವಾಲಯಕ್ಕೆ ದಾನವಾಗಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಸದರಿ ಜಾಗವನ್ನು ಯಾವ ಕಾರಣಕ್ಕಾಗಿ ದಾನವಾಗಿ ನೀಡಲಾಗಿದೆ: ಪ್ರಸ್ತುತ ಎಷ್ಟು ಎಕರೆ ಜಾಗ ದೇವಾಲಯದ ಹೆಸರಿನಲ್ಲಿದೆ: ಅನಧಿಕೃತವಾಗಿ ಒತ್ತುವರಿಯಾದ ಜಾಗವೆಷ್ಟು (ಒತ್ತುವರಿದಾರರ ಹೆಸರಿನೊಂದಿಗೆ ಮಾಹಿತಿ ನೀಡುವುದು) | • ಬೆಂಗಳೂರು ಮಲ್ಲೇಶ್ವರಂ ನಿವಾಸಿಯಾದ ಶ್ರೀಮತಿ ದ್ವಾರಕಾಬಾಯಿ ವೇದಾಂತಂ ರವರು ಮಾಗಡಿ ತಾಲ್ಲೂಕು, ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಸೇರಿದ ತಾವರೆಕೆರೆ ಹೋಬಳಿಯ ಬ್ಯಾಲಾಳು, ಚೋಳನಾಯಕನಹಳ್ಳಿ, ಪೆದ್ದನಪಾಳ್ಯ, ದೊಡ್ಡಮಾರನ ಹಳ್ಳಿ, ಮತ್ತು ಕಾಡುಕರೇನಹಳ್ಳಿ (ಕುರುಬರ ಹಳ್ಳಿ) ಗ್ರಾಮಗಳಿಗೆ ಸೇರಿದ ಒಟ್ಟು1198-34 ಎಕರೆ/ಗುಂಟೆ ವಿಸ್ತೀರ್ಣದ ಪೈಕಿ ಬ್ಯಾಲಾಳು ಮತ್ತು ಕಾಡುಕರೇನಹಳ್ಳಿ (ಕುರುಬರಹಳ್ಳಿ) ಗ್ರಾಮದಲ್ಲಿ ಖರಾಬು ಜಮೀನುಗಳನ್ನು ಒಳಗೊಂಡು ವಿವಿಧ ಸರ್ವೆ ನಂಬರ್‌ಗಳ ಜಮೀನುಗಳನ್ನು ದತ್ತಿ ರೂಪದಲ್ಲಿ 1939ರಲ್ಲಿ ಅಂದಿನ ಮೈಸೂರು ಸರ್ಕಾರದ "ಮುಜರಾಯಿ ಕಮೀಷನರ್" ರವರ ಹೆಸರಿಗೆ ದಾನವಾಗಿ ನೀಡಿರುತ್ತಾರೆ.<br>(ದಾನದ ನೀಡಿದ ಜಮೀನುಗಳ ಸರ್ವೆ ನಂಬರ್‌ಗಳು ಹಾಗೂ ವಿಸ್ತೀರ್ಣದ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ)<br><br>• ಸದರಿ ಜಾಗವನ್ನು ಶ್ರೀಮತಿ ದ್ವಾರಕಾಬಾಯಿ ವೇದಾಂತಂ ಇವರು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥಸ್ವಾಮಿ ದೇವಾಲಯದಲ್ಲಿ ತುಲಾಮಾಸದಲ್ಲಿ ನಡೆಯುವ ಪೂಜಾ ಕೈಂಕರ್ಯಗಳ ಸಂದರ್ಭದಲ್ಲಿ ಆಗಮಿಸುವ ಭಕ್ತಾಧಿಗಳಿಗೆ ಅನ್ನ ಸಂತರ್ಪಣೆಗಾಗಿ ಈ ಆಸ್ತಿಗಳ ಒಟ್ಟು ಆದಾಯದ 1/3 ಭಾಗವನ್ನು(398 ಎಕರೆ-11 ಗುಂಟೆ) ಉಪಯೋಗಿಸ ತಕ್ಕದೆಂದೂ, ಉಳಿದ ಹಣವನ್ನು ವೈದ್ಯಕೀಯ ಶಿಕ್ಷಣ ಮಾಡುವ ಮಹಿಳಾ ವಿದ್ಯಾರ್ಥಿಗಳಿಗೆ ಮತ್ತು ಆರೋಗ್ಯದ ಮಾಹಿತಿಗಳನ್ನು ಪಸರಿಸುವ ಬಗ್ಗೆ ಮತ್ತು ಶುಚಿತ್ವದ ಅಭ್ಯಾಸವನ್ನು ಬೆಳೆಸುವ ಸಂಬಂಧ |

| | ಪ್ರಶ್ನೆ | ಉತ್ತರ |
|---|---|---|
| | | ಅಂತಹ ವಿದ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ಕೊಡತಕ್ಕದೆಂದೂ ದಾನಪತ್ರದಲ್ಲಿ ಇಚ್ಛೆ ವ್ಯಕ್ತಪಡಿಸಿರುತ್ತಾರೆ.<br><br>• ಪ್ರಸ್ತುತ ಪಹಣಿಗಳಂತೆ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಸಲ್ಲಿಸಿದ ಕಂದಾಯ ದಾಖಲೆಗಳಲ್ಲಿ ಭೂಮಿ ತಂತ್ರಾಂಶದಂತೆ ಒಟ್ಟು 155-22 ಎಕರೆ/ಗುಂಟೆ ವಿಸ್ತೀರ್ಣದ ಜಮೀನು ಶ್ರೀ ರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವರ ಹೆಸರಿನಲ್ಲಿ ಪಹಣಿ ಇರುವುದಾಗಿ ಕಂಡುಬಂದಿದ್ದು ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ.<br><br>• ದಾನವಾಗಿ ನೀಡಿದ ಸದರಿ ಜಮೀನುಗಳ ಪ್ರಸ್ತುತ ಸ್ಥಿತಿಗತಿಗಳನ್ನು ಆಧ್ಯಯನ ಮಾಡಿ, ಅನಧಿಕೃತ ಪರಭಾರೆ ಅಥವಾ ಅನಧಿಕೃತ ಒತ್ತುವರಿಗಳು ಆಗಿದ್ದಲ್ಲಿ ಅಂತಹವುಗಳನ್ನು ಗುರುತಿಸಿ ಸರ್ಕಾರದ ವಶಕ್ಕೆ ಪಡೆಯಲು ಸರ್ಕಾರದ ಆದೇಶ ಸಂಖ್ಯೆ:ಕಂಇ.98/ಮುಅಬಿ/2020-21 ದಿನಾಂಕ:28-09-2021 ಮತ್ತು ದಿನಾಂಕ:11-11-2021ರ ಅನ್ವಯ ಧಾರ್ಮಿಕ ದತ್ತಿ ಆಯುಕ್ತರು, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಒಟ್ಟು 13 ಜನ ಅಧಿಕಾರಿಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿದ್ದು ದಾಖಲೆಗಳ ಪರಿಶೀಲನೆ ಪ್ರಗತಿಯಲ್ಲಿದೆ. |
| ಆ) | ಸದರಿ ಜಾಗದಲ್ಲಿ ಪ್ರಸ್ತುತ ಒಟ್ಟು ಎಷ್ಟು ಎಕರೆ ಜಾಗ ಒತ್ತುವರಿ ಪರಭಾರೆಯಾಗಿದೆ: ಯಾವ ವರ್ಷದಲ್ಲಿ ಬೇರೆಯವರ ಹೆಸರಿನಲ್ಲಿ ದಾಖಲೆಗಳಾಗಿವೆ: ಈ ಅಕ್ರಮ ಅನಧಿಕೃತ ಪರಭಾರೆಗೆ ದಾಖಲೆಗಳನ್ನು ಸೃಷ್ಟಿಸುವಲ್ಲಿ ಸಹಕರಿಸಿದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡದಿರಲು ಕಾರಣವೇನು: (ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಹಿ ಮಾಡಿದ ಅಧಿಕಾರಿಗಳ ಹೆಸರಿನೊಂದಿಗೆ ವಿವರ ನೀಡುವುದು) | • ಪ್ರಸ್ತಾಪಿತ ಜಮೀನುಗಳ ಪೈಕಿ ಬಹುತೇಕ ಜಮೀನುಗಳನ್ನು ಈ ಹಿಂದೆಯೇ ಇನಾಂ ರದ್ದಿಯಾತಿ ಕಾಯ್ದೆ, ಭೂ ಸುಧಾರಣ ಕಾಯ್ದೆ, ಭೂ ಮಂಜೂರಾತಿ ಮತ್ತು ಭೂಸ್ವಾಧೀನ ಕಾಯ್ದೆ ಅಡಿಯಲ್ಲಿ ಪರಭಾರೆ ಮಾಡಲಾಗಿರುತ್ತದೆ.<br><br>• ಮಾನ್ಯ "ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ"ಯು ಅಧಿಸೂಚಿತ ದೇವಾಲಯಗಳ ಜಮೀನುಗಳ ಮಾಹಿತಿ ಮತ್ತು ಅವುಗಳ ಒತ್ತುವರಿಯನ್ನು ತೆರವುಗೊಳಿಸುವ ಸಂಬಂಧ ಈವರೆಗೆ ನಡೆಸಿದ ಹಲವಾರು ಸಭೆಯಲ್ಲಿ ಪ್ರಸ್ತಾಪಿತ ಜಮೀನಿನ ಬಗ್ಗೆ ಚರ್ಚಿಸಿ ನೀಡಲಾದ ಸೂಚನೆ ಮತ್ತು ನಿರ್ದೇಶನದಂತೆ |

| ಪ್ರಶ್ನೆ | | ಉತ್ತರ |
|---|---|---|
| | | ಮಾಹಿತಿಯನ್ನು ತಹಸೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಸಮಿತಿ ಸಭೆಗೆ ಒದಗಿಸಿದ್ದು, ಅದರಂತೆ ಒಟ್ಟು 155-22 ಎ/ಗು ವಿಸ್ತೀರ್ಣದ ಜಮೀನು ಶ್ರೀರಂಗಪಟ್ಟಣದ ಶ್ರೀ ರಂಗನಾಥ ಸ್ವಾಮಿ ದೇವರ ಹೆಸರಿನಲ್ಲಿ ಪಹಣಿ ಇರುತ್ತದೆ. ಉಳಿದ ಜಮೀನುಗಳು ನಿಯಮ ಬಾಹಿರವಾಗಿ ಒತ್ತುವರಿ/ ಪರಭಾರೆ/ ಭೂ ಮಂಜೂರಾತಿ/ ಭೂ ಸ್ವಾಧೀನದ ಮೂಲಕ ಪ್ರಾಧಿಕಾರವು ಮಂಜೂರಾತಿ ನೀಡಿರುವಂತೆ ಸದರಿ ವ್ಯಕ್ತಿಗಳ ಹೆಸರಿನಲ್ಲಿರುತ್ತದೆ.<br><br>• ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಬರುವ ಬ್ಯಾಲಾಳು ಗ್ರಾಮದ ಸರ್ವೆ ನಂಬರ್ 47/1 ರಿಂದ 47/76 ರವರೆಗೆ ಪೋಡಿಯಾಗಿದ್ದು, ಪೂರಾ ವಿಸ್ತೀರ್ಣ ಕರ್ನಾಟಕ ಗೃಹ ಮಂಡಳಿಗೆ ಭೂಸ್ವಾಧೀನವಾಗಿರುತ್ತದೆ. ಸರ್ವೆ ನಂಬರ್ 51 ರಲ್ಲಿ 49-16 ಎ/ಗು ಖರಾಬು ಜಾತಾ 45-00 ಎಕರೆ ಜಮೀನು ಎಲ್‌ಆರ್‌ಎಫ್ ಐನ್‌ಎ(ತಾ) 14,15,16,17, 18/81-82 ದಿನಾಂಕ:20-05-1986 ರಂತೆ ಐದು ಜನ ರೈತರುಗಳಿಗೆ ಮಂಜೂರಿಯಾಗಿದ್ದು, ನಂತರ ಇಸ್ರೋ ಸಂಸ್ಥೆಗೆ (ಬಾಹ್ಯಾಕಾಶ ಇಲಾಖೆಗೆ) ಪೂರಾ ಜಮೀನು ಭೂಸ್ವಾಧೀನ ವಾಗಿರುತ್ತದೆ. ಎಲ್.ಎ.ಕ್ಯೂ(6).ಎಸ್.ಆರ್.9/2004-05 ರಂತೆ ದಿನಾಂಕ: 05-07-2005 ರಂತೆ ಇಸ್ರೋ ವಶದಲ್ಲಿ ಇರುತ್ತದೆ. ಸರ್ವೆ ನಂ.53ರಲ್ಲಿ 19-00 ಎಕರೆ ವಿಸ್ತೀರ್ಣದ ಪೈಕಿ 2-20 ಎ/ಗು ಜಮೀನು ಎಲ್.ಆರ್.ಎಫ್(7ಎ) 126/2000-01 ದಿನಾಂಕ: 05-07-2005 ರಲ್ಲಿ ಮಂಜೂರಿಯಾಗಿರುತ್ತದೆ.<br><br>• ಸದರಿ ಜಾಗದಲ್ಲಿ ಪ್ರಸ್ತುತ ಒಟ್ಟು ಎಷ್ಟು ಎಕರೆ ಜಾಗ ಒತ್ತುವರಿ, ಪರಭಾರೆಯಾಗಿದೆ; ಯಾವ ವರ್ಷದಲ್ಲಿ ಬೇರೆಯವರ ಹೆಸರಿನಲ್ಲಿ ದಾಖಲೆಗಳಾಗಿವೆ; ಈ ಅಕ್ರಮ ಅನಧಿಕೃತ ಪರಭಾರೆಗೆ ದಾಖಲೆಗಳನ್ನು ಸೃಷ್ಟಿಸುವಲ್ಲಿ ಸಹಕರಿಸಿದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡುವ ಕುರಿತು ಹಾಗೂ ದಾನವಾಗಿ ನೀಡಿದ ಸದರಿ ಜಮೀನುಗಳ ಪ್ರಸ್ತುತ ಸ್ಥಿತಿಗತಿಗಳನ್ನು ಆಧ್ಯಯನ ಮಾಡಿ, ಅನಧಿಕೃತ ಪರಭಾರೆ ಅಥವಾ ಅನಧಿಕೃತ |

| ಪ್ರಶ್ನೆ | | ಉತ್ತರ |
|---|---|---|
| | | ಒತ್ತುವರಿಗಳು ಆಗಿದ್ದಲ್ಲಿ ಅಂತಹವುಗಳನ್ನು ಗುರುತಿಸಿ ಸರ್ಕಾರದ ವಶಕ್ಕೆ ಪಡೆಯಲು ಸರ್ಕಾರದ ಆದೇಶ ಸಂಖ್ಯೆ: ಕಂಇ.98/ ಮುಅಬಿ/2020-21 ದಿನಾಂಕ:28-09-2021 ಮತ್ತು ದಿನಾಂಕ:11-11-2021ರ ಅನ್ವಯ ಧಾರ್ಮಿಕ ದತ್ತಿ ಆಯುಕ್ತರು, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಒಟ್ಟು 13 ಜನ ಅಧಿಕಾರಿಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿದ್ದು ದಾಖಲೆಗಳ ಪರಿಶೀಲನೆ ಪ್ರಗತಿಯಲ್ಲಿದೆ.<br>• ಸದರಿ ಜಾಗಕ್ಕೆ ಸಂಬಂಧಿಸಿದಂತೆ, ಪ್ರಸ್ತಾಪಿತ ಚೋಳನಾಯಕನಹಳ್ಳಿ, ಪೆದ್ದನಪಾಳ್ಯ, ದೊಡ್ಡ ಮಾರನಹಳ್ಳಿ ಮತ್ತು ಕಾಡುಮಾರನಹಳ್ಳಿಯ ಸರ್ವೆ ನಂಬರ್‌ಗಳಲ್ಲಿ ಅನಧಿಕೃತವಾಗಿ ಒತ್ತುವರಿಯಾಗಿರುವ ಬಗ್ಗೆ, ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣಗಳ ಸಂಖ್ಯೆ:44/16-17, 46/16-17, 47/16-17, 15/16-17ರಂತೆ ಸ್ವಯಂ ಪ್ರೇರಿತ ಪ್ರಕರಣಗಳು ದಾಖಲಾಗಿರುತ್ತದೆ. ಸದರಿ ಜಾಗದಲ್ಲಿ ಒತ್ತುವರಿಯಾಗಿರುವ ಬಗ್ಗೆ ಅಳತೆ ಮಾಡಿ ಗುರುತಿಸಿಕೊಡಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ರವರಿಗೆ ಸೂಚಿಸಲಾಗಿರುತ್ತದೆ. |
| ಇ) | ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೆ ನಂ-79ರಲ್ಲಿ 15 ಎಕರೆ 12 ಗುಂಟೆ ಜಾಗ ಬೆಂಗಳೂರು ನಗರ ತಿಗಳರಪೇಟೆ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿರುವ ಕುರಿತು ಮುಜರಾಯಿ ಇಲಾಖೆಯಲ್ಲಿ ಮಾಹಿತಿ ಇದೆಯೇ; ಪ್ರಸ್ತುತ ಆ ಜಾಗದ ಪಹಣಿಯಲ್ಲಿ ಯಾರ ಹೆಸರು ನಮೂದು ಇದೆ; ಎಷ್ಟು ಜಾಗ ಒತ್ತುವರಿಯಾಗಿದೆ; ಜಾಗ ಒತ್ತುವರಿಗೆ ಸಹಕರಿಸಿದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸದಿರಲು ಕಾರಣವೇನು? (ವಿವರ ನೀಡುವುದು) | • ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೆ ನಂ-79 ರಲ್ಲಿ 15 ಎಕರೆ 12 ಗುಂಟೆ ಜಾಗ ಬೆಂಗಳೂರು ನಗರ ತಿಗಳರಪೇಟೆ ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿರುತ್ತದೆ.<br>• ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕರ ನ್ಯಾಯಾಲಯವು ಸದರಿ ನೀಲಸಂದ್ರ ಗ್ರಾಮದ ಹೊಸ ಸರ್ವೆ ನಂ-119 ಮತ್ತು 120 ರಂತೆ ಅನಧಿಕೃತವಾಗಿ ದುರಸ್ತಿ ಮಾಡಿರುವ ಪೋಡಿ ಟಿಪ್ಪಣಿ ಸರ್ವೆ ದಾಖಲೆಗಳನ್ನು ರದ್ದುಪಡಿಸಿದ್ದು, ರದ್ದುಪಡಿಸಲಾದ ಪೋಡಿ ಟಿಪ್ಪಣಿಗಳ ವಿಸ್ತೀರ್ಣವನ್ನು ಈ ಮೊದಲಿನಂತೆ ಸರ್ವೆ ನಂ-79ಕ್ಕೆ ದಾಖಲಿಸಿಕೊಂಡು ನಿರ್ವಹಣೆ ಮಾಡಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಆದೇಶಿಸಿದ್ದು, ಅದರಂತೆ ಕ್ರಮ ಚಾಲ್ತಿಯಲ್ಲಿರುತ್ತದೆ. |

| ಪ್ರಶ್ನೆ | | ಉತ್ತರ |
|---|---|---|
| | | • ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೆ ನಂ-79ರಲ್ಲಿ ಪ್ರಸಕ್ತ 229 ಜನ ಒತ್ತುವರಿದಾರರಿದ್ದು, ಈ ಪೈಕಿ 192 ಒತ್ತುವರಿದಾರರ ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. |

ಸಂಖ್ಯೆ: ಕಂಇ 7 ಮುಸಪ್ರ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

# ಅನುಬಂಧ - 1

ಪು 5

ದಾನಪತ್ರದ ಸಂಖ್ಯೆ.1957/1938-39 ದಿ/15-4-1939 ವಾಲ್ಯೂಮ್-540

| ಕ್ರಮ ಸಂ | ಗ್ರಾಮ | ರೀ.ಸರ್ವೆ ನಂಬರ್ | ವಿಸ್ತೀರ್ಣ | | |
|---|---|---|---|---|---|
| | | | ಒಟ್ಟು | ಖುಷ್ಕಿ | ತರಿ |
| 1 | ಬ್ಯಾಲಾಳು | 47 | 31-00 | 31-00 | – |
| 2 | ಅದೇ | 51 | 45-00 | 45-00 | – |
| 3 | ಅದೇ | 53 | 19-00 | 19-00 | – |
| 4 | ಅದೇ | ಖರಾಬು | 100-00 | 100-00 | – |
| | ಗ್ರಾಮದ ಒಟ್ಟು ವಿಸ್ತೀರ್ಣ | | 195-00 | 195-00 | – |
| | ಚೋಳನಾಯಕ್ಕನಹಳ್ಳಿ | 56 | 30-26 | 30-26 | – |
| 1 | ಅದೇ | 57 | 33-12 | 33-10 | 0-02 |
| 2 | ಅದೇ | 58 | 23-33 | 23-30 | 0-03 |
| 3 | ಅದೇ | 59 | 109-25 | 109-25 | – |
| 4 | ಅದೇ | 60 | 6-00 | 6-00 | – |
| 5 | ಅದೇ | 61 | 27-00 | 27-00 | - |
| 6 | ಅದೇ | 62 | 27-00 | 27-00 | – |
| 7 | ಅದೇ | 63 | 29-33 | 29-33 | – |
| | ಗ್ರಾಮದ ಒಟ್ಟು ವಿಸ್ತೀರ್ಣ | | 287-09 | 287-04 | 0-05 |
| 1 | ದೊಡ್ಡಮಾರನಹಳ್ಳಿ | 28 | 24-00 | 24-00 | – |
| 2 | ಅದೇ | 29 | 21-00 | 21-00 | - |
| 3 | ಅದೇ | 30 | 24-36 | 24-36 | – |
| 4 | ಅದೇ | 32 | 19-00 | 19-00 | – |
| | ಗ್ರಾಮದ ಒಟ್ಟು ವಿಸ್ತೀರ್ಣ | | 88-36 | 88-36 | – |
| 1 | ಪೆದ್ದನಪಾಳ್ಯ | 7 | 18-25 | 18-25 | – |
| 2 | ಅದೇ | 8 | 67-13 | 67-13 | – |
| 3 | ಅದೇ | 9 | 70-23 | 70-23 | – |
| 4 | ಅದೇ | 10 | 50-39 | 50-39 | – |
| 5 | ಅದೇ | 11 | 59-06 | 59-06 | – |
| | ಗ್ರಾಮದ ಒಟ್ಟು ವಿಸ್ತೀರ್ಣ | | 266-26 | 266-26 | – |

ದಾನಪತ್ರದ ಸಂಖ್ಯೆ.1957/1938-39 ದಿ/15-4-1939 ವಾಲ್ಯೂಮ್-540

| ಕ್ರಮ ಸಂ | ಗ್ರಾಮ | ರೀ.ಸರ್ವೆ ನಂಬರ್ | ವಿಸ್ತೀರ್ಣ | | |
|---|---|---|---|---|---|
| | | | ಒಟ್ಟು | ಖುಷ್ಕಿ | ತರಿ |
| 1 | ಕಾಡುಕರೇನಹಳ್ಳಿ (ಕುರುಬರಹಳ್ಳಿ) | 117 | 2-00 | 2-00 | – |
| 2 | | 118 | 1-37 | - | 1-37 |
| 3 | ಅದೇ | 119 | 4-14 | 4-14 | – |
| 4 | ಅದೇ | 120 | 4-20 | 4-20 | – |
| 5 | ಅದೇ | 121 | 3-04 | 3-04 | – |
| 6 | ಅದೇ | 122 | 1-28 | - | 1-28 |
| 7 | ಅದೇ | 124 | 2-00 | - | 2-00 |
| 8 | ಅದೇ | 126 | 2-20 | - | 2-20 |
| 9 | ಅದೇ | 127 | 4-21 | 4-21 | – |
| 10 | ಅದೇ | 128 | 1-33 | 1-33 | – |
| 11 | ಅದೇ | 129 | 6-21 | 6-21 | – |
| 12 | ಅದೇ | 130 | 1-18 | 1-18 | – |
| 13 | ಅದೇ | 131 | 9-10 | 9-10 | – |
| 14 | ಅದೇ | 132 | 1-08 | 1-08 | – |
| 15 | ಅದೇ | 133 | 6-00 | 6-00 | – |
| 16 | ಅದೇ | 134 | 5-04 | 5-04 | – |
| 17 | ಅದೇ | 135 | 4-14 | 4-14 | – |
| 18 | ಅದೇ | 136 | 6-00 | 6-00 | – |
| 19 | ಅದೇ | 137 | 2-03 | - | 2-03 |
| 20 | ಅದೇ | 138 | 3-11 | 3-11 | |
| 21 | ಅದೇ | 139 | 6-18 | 6-18 | |
| 22 | ಅದೇ | 140 | 7-00 | 7-00 | |
| 23 | ಅದೇ | 142 | 3-17 | 0-34 | 2-23 |
| 24 | ಅದೇ | 143 | 3-00 | | 3-00 |
| 25 | ಅದೇ | 144 | 2-32 | 2-32 | |
| 26 | ಅದೇ | 146 | 5-35 | 5-35 | |
| 27 | ಅದೇ | 147 | 5-30 | 5-30 | |
| 28 | ಅದೇ | 148 | 2-35 | 2-19 | 0-16 |
| 29 | ಅದೇ | 149 | 1-39 | 0-32 | 1-07 |

ದಾನಪತ್ರದ ಸಂಖ್ಯೆ,1957/1938-39 ದಿ/15-4-1939 ವಾಲ್ಯೂಮ್-540

| ಕ್ರಮ ಸಂ | ಗ್ರಾಮ | ರೀ,ಸರ್ವೆ ನಂಬರ್ | ವಿಸ್ತೀರ್ಣ | | |
|---|---|---|---|---|---|
| | | | ಒಟ್ಟು | ಖುಷ್ಕಿ | ತರಿ |
| 30 | ಕಾಡುಕರೇನಹಳ್ಳಿ (ಕುರುಬರಹಳ್ಳಿ) | 152 | 5-03 | 5-03 | – |
| 31 | | 153 | 5-02 | 5-02 | – |
| 32 | ಅದೇ | 154 | 6-15 | 6-15 | – |
| 33 | ಅದೇ | 155 | 2-37 | 2-37 | – |
| 34 | ಅದೇ | 156 | 3-18 | 3-18 | – |
| 35 | ಅದೇ | 157 | 4-34 | 4-34 | – |
| 36 | ಅದೇ | 161 | 4-00 | 4-00 | – |
| 37 | ಅದೇ | 162 | 7-36 | 7-36 | – |
| 38 | ಅದೇ | 163 | 5-24 | 5-24 | – |
| 39 | ಅದೇ | 164 | 3-02 | 3-02 | – |
| 40 | | ಖರಾಬು | 200-00 | - | – |
| ಗ್ರಾಮದ ಒಟ್ಟು ವಿಸ್ತೀರ್ಣ | | | 361-03 | 143-29 | 17-14 |

# <u>ಅನುಬಂಧ-2</u>

**ಶ್ರೀ ರಂಗನಾಥಸ್ವಾಮಿ ದೇವರ ಹೆಸರಿನಲ್ಲಿ ಪಹಣಿ ಬರುತ್ತಿರುವ ಜಮೀನಿನ ವಿವರ**

| ಕ್ರ. ಸಂ | ಗ್ರಾಮ | ಸರ್ವೆ ನಂ | ಶ್ರೀ ರಂಗನಾಥಸ್ವಾಮಿ ಎಂದು ಹೆಸರಿನಲ್ಲಿನ ವಿಸ್ತೀರ್ಣ ಎಕರೆ/ಗುಂಟೆ |
|---|---|---|---|
| 1 | ಚೋಳನಾಯಕಹಳ್ಳಿ | 57 | 32-12 |
| 2 | ಚೋಳನಾಯಕಹಳ್ಳಿ | 58 (ಹಿಸ್ಸಾ ಪೋಡಾಗಿದೆ 58/10) | 1-13 |
| 3 | ಚೋಳನಾಯಕಹಳ್ಳಿ | 59 | 59-25 |
| 4 | ಚೋಳನಾಯಕಹಳ್ಳಿ | 60 | 0-17 |
| 5 | ಚೋಳನಾಯಕಹಳ್ಳಿ | 61 | 26-36 |
| 6 | ಚೋಳನಾಯಕಹಳ್ಳಿ | 62 | 4-32 |
| 7 | ಚೋಳನಾಯಕಹಳ್ಳಿ | 63 | 30-07 |
| | | ಒಟ್ಟು | **155-22** |

K. Padma

**ಆಯುಕ್ತರ ಪರವಾಗಿ**
**ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.**